Ex. 46/2019 PW1

ದಿಃ 30-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಎದುರುದಾರ ಪರ ಶ್ರೀ ವಿವಿ ವಕೀಲರಿಂದ

ನಾನು ಈ ಪ್ರಕರಣವನ್ನು ಕೃಷ್ಣಸಿಂಗ್ ಹಾಗೂ ರೂಪ್‌ಸಿಂಗ್ ರವರ ವಿರುದ್ಧ ಸಲ್ಲಿಸಿರುತ್ತೇನೆ. ನಾನು ಮೂಲ ದಾವೆಯನ್ನು ಕೃಷ್ಣಸಿಂಗ್ ರವರ ವಿರುದ್ಧ ಸಲ್ಲಿಸಿದ್ದೆ. ಸದರಿ ಪ್ರಕರಣದಲ್ಲಿ ರೂಪ್‌ಸಿಂಗ್‌ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಅವರು ಯಾವುದೇ ತೊಂದರೆ ನೀಡದೇ ಇದ್ದರೂ ಅವರ ವಿರುದ್ಧ ಸುಳ್ಳು ಅಮಲ್ ಜಾರಿ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2002 ನೇ ಇಸವಿಯಿಂದಲೂ ಎದುರುದಾರರು ಅವರು ಸ್ವಾಧೀನ ಇರುವ ಆಸ್ತಿಯಲ್ಲೇ ಇದ್ದು ಯಾರಿಗೂ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಆಸ್ತಿಗೆ ಸಂಬಂಧಿಸಿದಂತೆ ಎಲ್ಲಾ ನ್ಯಾಯಾಲಯಗಳಿಗೆ ಹೋಗಿ ನನ್ನ ಪರವಾಗಿ ದಾಖಲೆ ಇಲ್ಲ ಎಂದು ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸಿದ ನಂತರ ಈಗ್ಗೆ 3-4 ತಿಂಗಳ ಹಿಂದೆ ನಗರಸಭೆಯಲ್ಲಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಖಾತೆ ಮಾಡಿಕೊಂಡಿರುವುದು ನಿಜ ಎಂದು ನುಡಿಯುತ್ತಾರೆ. ಈ ಹಿಂದೆ ನಗರಸಭೆಗೆ ಅರ್ಜಿ ನೀಡಿದ್ದು ಅವರು ದಾಖಲೆ ಇಲ್ಲದ ಕಾರಣ ಖಾತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಿಸಿ.ನಂ.42/2017-2018 ನೇ ಸಾಲಿನಲ್ಲಿ ಪೌರಾಯುಕ್ತಕರು ಭದ್ರಾವತಿರವರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ದಾಖಲೆ ಇರುವುದಿಲ್ಲ ಎಂದು ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿಯನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ನಾನು ಕಾನೂನು ಬಾಹಿರವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿರುವ ಕಾರಣ ಕರ್ನಾಟಕ ಲೋಕಾಯುಕ್ತಕರಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ

Ex. 46/2019 PW1

ಸರಿಯಲ್ಲ. ನಂತರ ನಗರಸಭೆಯವರು ನಾನು ದಾಖಲೆ ನೀಡದೇ ಇರುವ ಕಾರಣ ಖಾತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ರಾಜಕೀಯ ಪ್ರಭಾವ ಬಳಸಿ ಯಾವುದೆ ದಾಖಲೆ ಇಲ್ಲದೇ ಇದ್ದರೂ ಇತ್ತೀಚೆಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರರಿಗೆ ವಯಸ್ಸಾಗಿದ್ದು ಕಣ್ಣು ಕಾಣುತ್ತಿಲ್ಲ ಎಂದರೆ ವಯಸ್ಸಾಗಿರುವುದು ನಿಜ ಎಂದು ನುಡಿಯುತ್ತಾರೆ. ಎದುರುದಾರರು ಯಾವತ್ತಾ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದಿಲ್ಲ ಹಾಗೂ ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆದೇಶ ಉಲ್ಲಂಘನೆ ಆದ ಬಗ್ಗೆ ಪೋಲೀಸರಿಗೆ ದೂರು ನೀಡಿರುತ್ತೇನೆ. ಎದುರುದಾರರು ತೊಂದರೆ ಮಾಡದೇ ಇರುವ ಕಾರಣ ಯಾವುದೇ ಪೋಲೀಸ್ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 31-05-2019 ರಂದು ಎದುರುದಾರರು ತೊಂದರೆ ನೀಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಈ ಪ್ರಕರಣಕ್ಕೂ ನಾನು ಹಾಜರುಪಡಿಸಿದ ದಾಖಲೆಗೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಎದುರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ದಿಃ 30-01-2025 ರಂದು ಸಾಕ್ಷಿಯ ಹೇಳಿಕೆಯನ್ನು ಮಧ್ಯಾಹ್ನ 12-10 ರಿಂದ 12-25 ರವರೆಗೆ ದಾಖಲಿಸಲಾಯಿತು.)

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,
ಓ.ಹೇ.ಕೇ.ಸರಿ.ಇದೆ.

(ನಾಸಿರ ಬಾನು)
2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು

Ex. 46/2019 PW1

ಪ್ರ.ದ.ನ್ಯಾದಂ. ಭದ್ರಾವತಿ